ಒ ಎಸ್ ನಂ.290/2012
ಡಿ.ಡಬ್ಲ್ಯೂ: 2 ಹಾಜರು

ದಿನಾಂಕ: 01-08-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಲ್ ಎಮ್ ಎಸ್ ವಕೀಲರಿಂದ:
2, 5, 7 ರಿಂದ 9 ಮತ್ತು 19 ರವರ ಪರವಾಗಿ:

ನನ್ನ ಅಜ್ಜ ಕೋನಪ್ಪ ಅಕ್ಕಿಸಾಗದರವರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ಮೂಲ ಊರು ಯಾವುದು ಎಂಬುದು ನನಗೆ ಗೊತ್ತಿಲ್ಲ. ನನ್ನಅಜ್ಜ ಅಕ್ಕಿಸಾಗರದವನಾಗಿದ್ದು ಶೇತ್ಕಿ ಕೆಲಸ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಅಕ್ಕಿಸಾಗರದಿಂದ ಗೋಕಾಕಕ್ಕೆ ಮೊದಲನೆ ಪ್ರತಿವಾದಿಯೊಂದಿಗೆ ಬಂದ ಎಂದರೆ ನನಗೆ ಗೊತ್ತಿಲ್ಲ. ಅಕ್ಕಿಸಾಗರದಲ್ಲಿ ನನ್ನ ಅಜ್ಜನಿಗೆ ತನ್ನ ದಿನನಿತ್ಯದ ಜೀವನ ಸಾಗಿಸಾಲು ಸಾಧ್ಯವಾಗದೇ ಇದ್ದುದ್ದರಿಂದ ಆತ ಗೋಕಾಕಕ್ಕೆ ಬಂದ ಎಂದರೆ ನನಗೆ ಗೊತ್ತಿಲ್ಲ. ಮೊದಲನೆ ಪ್ರತಿವಾದಿ ಗೋಕಾಕಕ್ಕೆ ಬಂದ ನಂತರ ಚಹಾ ಮಾರಾಟ ಮಾಡುತ್ತಿದ್ದ ಎಂದರೆ ಸಾಕ್ಷಿ ನಾನು ಅದನ್ನು ನೋಡಿಲ್ಲ ಆದರೆ ಹೇಳಿದ್ದನ್ನು ಕೇಳಿದ್ದೇನೆಂದು ನುಡಿದಿರುತ್ತಾರೆ.

ನನ್ನ ಅಜ್ಜ ಕೋನಪ್ಪ ತಾನು ಜೀವಂತ ಇರುವವರೆಗೂ ತನ್ನ ಹೆಸರಿನಲ್ಲಿ ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿ ಹಾಜರು ಮಾಡಿರುತ್ತೇನೆ. 1945 ರಿಂದ 1950 ರಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಸಂತೆ ಇದ್ದ ಊರಿನಲ್ಲಿ ಬಟ್ಟೆ ವ್ಯಾಪಾರಕ್ಕಾಗಿ ಹೋಗುತ್ತಿದ್ದರು ಎಂದರೆ ಸಾಕ್ಷಿ ಅವರು ಹುಟ್ಟಿದ್ದೆ 1951 ಎಂದು ನುಡಿದಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ಬೇರೆ ಊರಿಗೆ ಬಟ್ಟೆ ವ್ಯಾಪಾರಕ್ಕಾಗಿ ಹೋಗಿದ್ದ ವಿಷಯ ನಿಮಗೆ ಗೊತ್ತೆ ? ಎಂದರೆ ಸಾಕ್ಷಿ 1965 ರ ನಂತರ ಅವರು ಹಾಗೆ ವ್ಯಾಪಾರಕ್ಕಾಗಿ ಹೋಗಿದ್ದು ನಾವು ಸಹ ಹೋಗುತ್ತಿದ್ದೇವು ಎಂದು ನುಡಿದಿರುತ್ತಾರೆ . 2 ಮತ್ತು 3 ನೇ ಪ್ರತಿವಾದಿಗಳು ಜೊತೆ ನಾನು ಸಹ ಬಟ್ಟೆ ವ್ಯಾಪಾರಕ್ಕಾಗಿ ಹೋಗುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ.ಟಿ.ಎಸ್ ಸಂಖ್ಯೆ 858 ನ್ನು 2 ಮತ್ತು 3 ನೇ ಪ್ರತಿವಾದಿಗಳು ಬಾಡಿಗೆಗೆ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ಮೊದಲನೆ ಪ್ರತಿವಾದಿ ತೆಗೆದುಕೊಂಡಿದ್ದ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಬಾಡಿಗೆ ಆದಾರದ ಮೇಲೆ ದಿಲ್ಲಿ ರೆಡಿಮೆಡ ಸ್ಟೋರನ್ನು ಪ್ರಾರಂಭಿಸಿದ್ದರು ಎಂದರೆ ಸಾಕ್ಷಿ 1962 ರಲ್ಲಿ ನನ್ನ ತಂದೆ ಬಾಡಿಗೆಗೆ ತೆಗೆದುಕೊಂಡು ಅದನ್ನು ಪ್ರಾರಂಬಿಸಿದ್ದರು ಎಂದು ನುಡಿದಿರುತ್ತಾರೆ. ಮೊದಲನೆ ಪ್ರತಿವಾದಿ ಯಾವತ್ತೂ ಬಟ್ಟೆ ವ್ಯಾಪಾರ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಅಣ್ಣ ತಮ್ಮಂದಿರು ವ್ಯವಹಾರ ಪಾಲುದಾರಿಕೆ ಎಂದರೆ ಹೌದು ಆದರೆ ಅದನ್ನು ಲೆಕ್ಕ ಪತ್ರದ ಉದ್ದೇಶಕ್ಕಾಗಿ ಮಾಡಿದ್ದೇವೆಂದು ನುಡಿದಿರುತ್ತಾರೆ. ದಿಲ್ಲಿ ರೆಡಿಮೆಡ ಸ್ಟೋರನಲ್ಲಿ ನಾನು ಪಾಲುದಾರ ಅಲ್ಲ ಎಂದರೆ ಸರಿ. ನಾನು ದಿಲ್ಲಿ ಬೆಸ್ಟ ಕಲೆಕ್ಷನ ವ್ಯವಹಾರದಲ್ಲಿ ಮಾತ್ರ ಪಾಲುದಾರ ಎಂದರೆ ಸರಿ. ನಾನು ಜನತಾ ಪುಡ್ ವರ್ಡ ಎಂಬ ಹೊಟೇಲನ್ನು ಪ್ರಾರಂಬಿಸಿದ್ದೆ ಎಂದರೆ ಸರಿ.

2006 ರಲ್ಲಿ ಸದರಿ ವ್ಯವಹಾರದ ನಷ್ಟದಿಂದಾಗ ನಾನು ಮುಚ್ಚಿದ್ದೆ ಎಂದರೆ ಸಾಕ್ಷಿ ನೌಕರರ ಕೊರತೆಯಿಂದಾಗಿ ಅದನ್ನು ಮುಚ್ಚಿದ್ದೆ ಎಂದು ನುಡಿದಿರುತ್ತಾರೆ . ನಾನು ಸದರಿ ವ್ಯವಾಹರವನ್ನು ಈಗ ಮತ್ತೆ ಪ್ರಾರಂಬಿಸಿದ್ದೇನೆ ಎಂದರೆ ಸರಿ. ನಾನು ಸದರಿ ವ್ಯವಹಾರನ್ನು ಹಣ ಗಳಿಸುವ ಉದ್ದೇಶದಿಂದ ಮಾಡಿದ್ದೆ ಎಂದರೆ ಸರಿ. ಜನತಾ ಪುಡ ವರ್ಡ ಪ್ರಾರಂಬಿಸುವ ವಿಚಾರ ನನಗೆ ಮಾತ್ರ ಬಂದಿತ್ತು ಎಂದರೆ ಸರಿ.

11 ನೇ ಪ್ರತಿವಾದಿ ಮೊಬೈಲ್ ಅಂಗಡಿ ನಡೆಸುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾವು ಎಲ್ಲಾ ಅಣ್ಣ ತಮ್ಮಂದಿರು ಒಂದಲ್ಲ ಒಂದು ವ್ಯಾಪಾರ ಮಾಡುತ್ತೇವೆ ಎಂದರೆ ಸರಿ. ನಾವು ಎಲ್ಲಾ ಅಣ್ಣ ತಮ್ಮಂದಿರು ಕಷ್ಟ ಪಟ್ಟು ದುಡಿದು ಅದರಿಂದ ನಾವು ಶ್ರೀಮಂತರು ಎಂದರೆ ಸರಿ. ನಾವು ಹುಟ್ಟುವಾಗ ಶ್ರೀಮಂತರು ಇರಲಿಲ್ಲ ಎಂದರೆ ಸರಿ. ವಾದಿ ಹಳ್ಳಿಗೆ ಹೋಗಿ ಯಾವತ್ತೂ ವ್ಯಾಪಾರ ಮಾಡಿಲ್ಲ. ನಾನು ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷ್ಯ ವಿಚಾರಣೆಯಲ್ಲಿ ನಾನು ಹಾಗೂ 2 ನೇ ಪ್ರತಿವಾದಿ ಹಳ್ಳಿಗೆ ಹೋಗಿ ವ್ಯಾಪಾರ ಮಾಡುತಿದ್ದ ವಿಷಯವನ್ನು ಬರೆಸಿಲ್ಲ ಎಂದರೆ ಸರಿ. ನನ್ನ ಎಲ್ಲಾ ಅಣ್ಣ ತಮ್ಮಂದಿರು ತಾವು ನಡೆಸುವ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾಲನ್ನು ತಾವೇ ತೆಗೆದುಕೊಂಡು ಬಂದು ಸ್ವಂತ ವ್ಯವಹಾರ ಮಾಡಎತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಕೂಡಿಯೇ ಮಾಡುತ್ತಾರೆ ನನ್ನದು ಮಾತ್ರ ಪ್ರತ್ಯೇಕ ಎಂದು ನುಡಿದಿರುತ್ತಾರೆ. ನನ್ನ ಅಂಗಡಿಗೆ ಮಾಲನ್ನು ನಾನೇ ತೆಗದುಕೊಂಡು ಬರುತ್ತೇನೆ ಎಂದರೆ ಸರಿ. ನಾನು ಉಳಿದ ಸಹೋದರರಿಗೆ ಮಾಲನ್ನು ಕೊಡಿಸಲು ಹೋಗುವುದಿಲ್ಲ ಎಂದರೆ ಸರಿ.

ವಾದಿ, ನನ್ನ, ಹಾಗೂ 7, 10 ಮತ್ತು 11 ನೇ ಪ್ರತಿವಾದಿಯರ ಮದುವೆ ಒಂದೇ ಕಾಲಕ್ಕೆ ಆಗಿದೆ ಎಂದರೆ ಸರಿ. ಖರ್ಚನ್ನು ಕಡಿಮೆ ಮಾಡಲು ನಾವು 4 ಜನ ಅಣ್ಣ ತಮ್ಮಂದಿರು ಒಂದೇ ಬಾರಿಗೆ ಮದುವೆಯಾಗಿದೆ ಎಂದರೆ ಸಾಕ್ಷಿ ಅದು ಹಿರಿಯರು ಮಾಡಿದ್ದು ಎಂದು ನುಡಿದಿರುತ್ತಾರೆ . ನಾವು 4 ಜನ ನಮ್ಮ ಮದುವೆಯ ಖರ್ಚಿಗೆ ನಮ್ಮ ನಮ್ಮ ಬಾಗದಷ್ಟು ಹಣ ನೀಡಿದ್ದೇವೆ ಎಂದರೆ ಸರಿ . ಮೊದಲನೆ ಪ್ರತಿವಾದಿ ನಮ್ಮ 4 ಜನ ಮದುವೆಗೆ ಯಾವುದೇ ಹಣ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ನಡೆಸುವ ಜನತಾ ಪುಡ್ ವರ್ಡ ಮತ್ತು ದಿಲ್ಲಿ ಬೆಸ್ಟ ಕಲೆಕ್ಷನ ವ್ಯವಹಾರದಲ್ಲಿ ನನ್ನ ಇನ್ನುಳಿದ ಸಹೋದರರು ಭಾಗವಹಿಸುವುದಿಲ್ಲ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರು ವ್ಯಾಪಾರದಲ್ಲಿ ನಾನು ಭಾಗವಹಿಸುವುದಿಲ್ಲ ಎಂದರೆ ಸಾಕ್ಷಿ ದಿಲ್ಲಿ ಅಪೆರಲ್ಸ ವ್ಯವಹಾರದಲ್ಲಿ ನಾನು ಮತ್ತು 5 ನೇ ಪ್ರತಿವಾದಿ ಸದರಿ ವ್ಯಪಾರದಲ್ಲಿ ಪಾಲುದಾರರಾಗಿದ್ದೇವೆಂದು ನುಡಿದಿರುತ್ತಾರೆ. ಸದರಿ ವ್ಯವಹಾರವನ್ನು ಹೊರತು ಪಡಿಸಿ ನನ್ನ ಅಣ್ಣ ತಮ್ಮಂದಿರು ಇನ್ನುಳಿದ ವ್ಯಾಪಾರದಲ್ಲಿ ನಾನು ಭಾಗವಹಿಸುವುದಿಲ್ಲ. ನಾವು ಅಣ್ಣ ತಮ್ಮಂದಿರು ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಪ್ರತ್ಯೇಕವಾಗಿ ತುಂಬುತ್ತೇವೆ ಎಂದರೆ ಸಾಕ್ಷಿ ಲೆಕ್ಕ ಪತ್ರಕ್ಕಾಗಿ ಮಾತ್ರ ಎಂದು ನುಡಿರುತ್ತಾರೆ. ಆ ಬಗ್ಗೆ ನಮ್ಮ ಅಣ್ಣ ತಮ್ಮಂದಿರಲ್ಲಿ ಯಾವುದೇ ಕರಾರು ಆಗಿರುವುದಿಲ್ಲ.

ಲೆಕ್ಕ ಪತ್ರದ ಉದ್ದೇಶಕ್ಕಾಗಿ ಮಾತ್ರ ನಾವು ಬೇರೆ ಬೇರೆಯಾಗಿ ಆದಾಯತ ತೆರಿಗೆ ಮತ್ತು ಮಾರಾಟ ತೆರಿಗೆ ತುಂಬುತ್ತೇವೆ ಎಂದರೆ ಸರಿಯಲ್ಲ.

ನಾನು ಸಹ ನ್ಯೂ ದಿಲ್ಲಿ ಅಪೆರೆಲ್ಸ ವ್ಯಾಪಾರದಲ್ಲಿ ಪಾಲುದಾರ ಎಂದು ತೋರಿಸಲು ದಾಖಲಾತಿ ಇರುತ್ತದೆ. ನಾವು ಅಣ್ಣ ತಮ್ಮಂದಿರು ಮಾಡಿದ ಬ್ಯಾಂಕ ಸಾಲ ಬೇರೆ ಬೇರೆ ಇದೆ ಎಂದರೆ ಸಾಕ್ಷಿ ದಿಲ್ಲಿ ಬೆಸ್ಟ ಕಲೆಕ್ಷನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಾಲ ಬೇರೆ ಇದೆ ಎಂದು ನುಡಿದಿರುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಾಲ ನನಗೆ ಮಾತ್ರ ಸಂಬಂಧಿಸಿದ್ದು ಎಂದರೆ ಸರಿ. ಮೊದಲನೆ ಪ್ರತಿವಾದಿ ಈಗ 11 ನೇ ಪ್ರತಿವಾದಿಯ ಜೊತೆ ವಾಸ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಎಲ್ಲಾ ಅಣ್ಣ ತಮ್ಮಂದಿರ ಜೊತೆ ಇರುತ್ತಾರೆಂದು ನುಡಿದಿರುತ್ತಾರೆ. ನಾನು ಮತ್ತು ನನ್ನ ಹೆಂಡತಿ ಮತ್ತು ಮಕ್ಕಳು ಬೇರೆ ಮನೆಕಟ್ಟಿಕೊಂಡು ಇದ್ದೇವೆ ಎಂದರೆ ಸರಿ. ನನ್ನ ಇನ್ನುಳಿದ ಅಣ್ಣ ತಮ್ಮಂದಿರು ಸಹ ತಮ್ಮ ಕುಟುಂಬ ಸಮೇತ ಬೇರೆ ಬೇರೆ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಒಂದೇ ಮನೆಯಲ್ಲಿ ಇರಲು ಅನುಕೂಲ ಇದರೇ ಇದ್ದುದ್ದರಿಂದ ಹಾಗೆ ಇದ್ದಾರೆಂದು ನುಡಿದಿರುತ್ತಾರೆ. ನಾನು ಆದಾಯ ತೆರಿಗೆ ಇಲಾಖೆಯ ಮುಂದೆ ನನ್ನ ಆಸ್ತಿ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟಂತೆ ಘೋಷಣೆ ಮಾಡಿದ್ದೇನೆ ಎಂದರೆ ಸರಿ. ಸದರಿ ಘೋಷಣೆಯಲ್ಲಿ ನಾನು ಮತ್ತು ಇನ್ನುಳಿದ ಅಣ್ಣ ತಮ್ಮಂದಿರ ವ್ಯವಹಾರ ಮತ್ತು ಆಸ್ತಿಗಳ ಬಗ್ಗೆ ತಿಳಿಸಿಲ್ಲ. ದಾವಾ ಐಟಮ ನಂ.10 ಕ್ಕೆ ಸಂಬಂಧಪಟ್ಟ ಖರೀದಿ ಪತ್ರ 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿ ಈಗ ನನ್ನ ಹೆಸರಿನಲ್ಲಿದೆ ಎಂದರೆ ಸರಿ.

2005 ರಲ್ಲಿ ಆದ ವಾಟ್ನಿ ಪತ್ರದ ಪ್ರಕಾರ ಸದರಿ ಆಸ್ತಿ ನನ್ನ ಹೆಸರಿಗೆ ಬಂದಿದೆ ಎಂದರೆ ಸಾಕ್ಷಿ ನನ್ನ 2 ಆಸ್ತಿಗಳನ್ನು ತೆಗೆದುಕೊಂಡು ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಮಾಡಲಾಗಿದೆ ಎಂದು ನುಡಿದಿರುತ್ತಾರೆ . ಸದರಿ ಆಸ್ತಿಯನ್ನು ಸಾಲದ ಉದ್ದೇಶಕ್ಕಾಗಿ ನನ್ನ ಹೆಸರಿನಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. 2005 ರಲ್ಲಿ ನಾನು 2 ಮತ್ತು 3 ನೇ ಪ್ರತಿವಾದಿಗಳಿಗೆ ಉದ್ಯೋಗ ಪ್ರಾರಂಬಿಸಲು ಹಣ ಕೇಳಿದ್ದು ಅವರು ನೀಡದೇ ಇದ್ದಾಗ ವಾಟ್ನಿ ಪತ್ರ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಡಿ-16 ರಲ್ಲಿ ನನ್ನ ಹೆಸರಿನಲ್ಲಿ ತೋರಿಸಿದ ಆಸ್ತಿಗಳು 2 ಮತ್ತು 3 ನೇ ಪ್ರತಿವಾದಿಗಳ ಆಸ್ತಿಗಳಾಗಿದ್ದು ಅವುಗಳನ್ನು ಅವರು ಕೇಳಿದಾಗ ನಾನು ವಾಪಸ್ಸು ನೀಡಬೇಕು ಎಂದರೆ ಸರಿಯಲ್ಲ. ನನ್ನ ಅಣ್ಣ ತಮ್ಮಂದಿರು ಖರೀದಿಸಿದ ಆಸ್ತಿಗಳು ಅವರ ಸ್ವಂತ ಆಸ್ತಿಗಳು ಎಂದರೆ ಸಾಕ್ಷಿ ನಾನು ಖರೀದಿಸಿದ್ದು ನನ್ನ ಸ್ವಂತ ಮತ್ತು ಅವರು ಖರೀದಿಸಿದ ಆಸ್ತಿಗಳಲ್ಲಿ ನನಗೂ ಹಕ್ಕು ಇದೆ ಎಂದು ನುಡಿದಿರುತ್ತಾರೆ.

ನನ್ನ ಸಹೋದರರು ಖರೀದಿಸಿದ ಆಸ್ತಿಗಳಲ್ಲಿ ನಾನು ಯಾವುದೇ ಹಣ ಹಾಕಿಲ್ಲ ಎಂದರೆ ಸಾಕ್ಷಿ ಮೂಲ ಬಂಡವಾಳದಿಂದ ಅವುಗಳನ್ನು ಖರೀದಿಸಿದ್ದು ಎಂದು ನುಡಿದಿರುತ್ತಾರೆ. ನನ್ನ ಸಾಲದ ಪತ್ರಗಳಿಗೆ ನನ್ನ ಉಳಿದ ಸಹೋದರರು ಸಹಿ ಮಾಡಿಲ್ಲ ಎಂದರೆ ಸರಿ. ನನ್ನ ಉಳಿದ ಸಹೋದರರು ಸಹ ತಮ್ಮ ತಮ್ಮ ಸಾಲದ ಪತ್ರಗಳಿಗೆ ನನ್ನ ಸಹಿ ಪಡೆದುಕೊಂಡಿಲ್ಲ. ದಿಲ್ಲಿ ಪ್ಯಾಶನ ಪ್ಲಾಜಾ ಕಟ್ಟಲು ನಾನು ಮತ್ತು ವಾದಿ ಸಾಲ ನೀಡಿಬಾರದು ಎಂದು ಎಲ್ಲಾ ಬ್ಯಾಂಕಗಳಿಗೆ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಮಕ್ಕಳು ಬೇರೆ ಉದ್ಯೋಗ ಮಾಡುವುದನ್ನು ನಾನು ಮತ್ತು ವಾದಿ ತಡೆದೇವು ಎಂದರೆ ಸರಿಯಲ್ಲ. ನಮ್ಮ ಎಲ್ಲಾ ಸಹೋದರರ ನಡುವೆ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಮ ನಂ.20 ಮತ್ತು 21 ನ್ನು ಸೇರಿಸಿ ಈ ಮನೆಕಟ್ಟಲಾಗಿದೆ ಎಂದರೆ ಸರಿ. ಸದರಿ ಮನೆಯಲ್ಲಿ ಪ್ರತಿವಾದಿ ನಂ.15 ರಿಂದ 17 ವಾಸ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಎರಡೂ ಆಸ್ತಿಗಳ ಉತಾರದಲ್ಲಿ 15 ನೇ ಪ್ರತಿವಾದಿಯ ಗಂಡನ ಹೆಸರು ಇದೆ ಎಂದರೆ ಸರಿ. ದಾವಾ ಐಟಮ ನಂ.25 ನನ್ನ ಮತ್ತು 11 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ದಿನಾಂಕಃ 05-08-2016 ರಂದು ನಾನು ಮತು 11 ನೇ ಪ್ರತಿವಾದಿ ಕಿರಣ ಶಂಕರ ಗೊಡಚಿ ಇವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಆಸ್ತಿಯನ್ನು ಎಷ್ಟು ಹಣಕ್ಕೆ ಮಾರಾಟ ಮಾಡಲಾಗಿದೆ ಎಂಬುದು ನನಗೆ ಗೊತ್ತಿಲ್ಲ . ಸದರಿ ಕ್ರಯದ ಹಣವನ್ನು ನನ್ನ ಸಹೋದರರು ಮಾಡಿದ ಸಾಲವನ್ನು ತೀರಿಸಲು ಮತ್ತು ಕಟ್ಟಡ ನವೀಕರಣಕಾಗ್ಕಿ ಉಪಯೋಗಿಸಿರುತ್ತೇವೆ . ನನ್ನ ಹೆಸರಿನಲ್ಲಿ ಈಗ 5 ಕೋಟಿ ರೂ. ಸಾಲ ಇರುತ್ತದೆ. 2015 ರಲ್ಲಿ ಸದರಿ ಸಾಲ 2 ವರೆ ಕೋಟಿ ಇತ್ತು. ನಾನು ಸದರಿ ಸಾಲವನ್ನು ತುಂಬಲು ದಾವಾ ಐಟಮ ನಂ.25 ನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟದ ಮಾಡಿದ ವಿಷಯವನ್ನು ವಾದಿ ಮತ್ತು ನನ್ನ ಇನ್ನುಳಿದ ಸಹೋದರರಿಗೆ ತಿಳಿಸಿಲ್ಲ ಎಂದರೆ ಸಾಕ್ಷಿ ಅವರ ಒಪ್ಪಿಗೆ ಮೇರೆಗೆ ಮಾರಾಟ ಮಾಡಲಾಗಿದೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಯ ಖರೀದಿ ಪತ್ರಕ್ಕೆ ನಾನು ಮತ್ತು 11 ನೇ ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಸಹೋದರರು ಸಹಿ ಮಾಡಿಲ್ಲ ಎಂದರೆ ಸರಿ.

ನಮ್ಮ ಸಹೋದರರಿಗೆ ಹೇಳದೆ ಸದರಿ ಆಸ್ತಿಯನ್ನು ಕ್ರಯಕ್ಕೆ ನೀಡಿದ್ದರಿಂದ ಅವರು ಯಾರೂ ಅದಕ್ಕೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಅದಕ್ಕೆ ಅವರು ಒಪ್ಪಿಗೆ ನೀಡಿದ್ದರು ಎಂದು ನುಡಿದಿರುತ್ತಾರೆ.

ನಿಡಿ-7 ರಲ್ಲಿ ತೋರಿಸಿದ ಆಸ್ತಿಗಳನ್ನು ನಾನು ಖರೀದಿಸಿದ್ದೇನೆ ಎಂದರೆ ಸರಿ. ಸದರಿ ಆಸ್ತಿಯಗಳ ಪೂರ್ವಕ್ಕೆ ಸಿ ಟಿ ಎಸ್ ಸಂಖ್ಯೆ 3308 ನಮ್ಮ ಮನೆ ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ತದ ನಂತರ ನಾನು ನಿಡಿ-8 ರ ಪ್ರಕಾರ ಮಾರಾಟ ಮಾಡಿದ್ದೇನೆ ಎಂದರೆ ಸರಿ. ನನ್ನ ಸಾಲವನ್ನು ತೀರಿಸಲು ಸದರಿ ಆಸ್ತಿಯನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ ಸಾಕ್ಷಿ ಎಲ್ಲರೂ ಕೂಡಿಯೇ ಮಾಡಿದ ಸಾಲವನ್ನು ತೀರಿಸಲು ಮಾರಾಟ ಮಾಡಿದ್ದೇನೆಂದು ನುಡಿದಿರುತ್ತಾರೆ. ಪ್ರಶಾಂತ ಲಾಡ್ಜ ಇರುವ ಜಾಗೆ 11 ನೇ ಪ್ರತಿವಾದಿಯ ಈಗ ಶುಭಂ ಗಾರ್ಮೆಂಟ್ಸ ಪ್ರಾರಂಭಿಸಿದ್ದಾನೆ ಎಂದರೆ ಸಾಕ್ಷಿ ಎಲ್ಲರೂ ಕೂಡಿಯೇ ಮಾಡಿದ್ದೇವೆಂದು ನುಡಿದಿರುತ್ತಾರೆ. ಸದರಿ ಶುಭಂ ಗಾರ್ಮೆಂಟ್ಸ ಕಟ್ಟಡ ಎರಡು ಸರ್ವೆ ನಂಬರಗಳು ಕೂಡಿ ಆಗಿದೆ ಎಂದರೆ ಸಾಕ್ಷಿ 2 ಅಥವಾ 3 ಇರಬಹುದು ಎಂದು ನುಡಿದಿರುತ್ತಾರೆ. ನಾನು ಶುಭಂ ಗಾರ್ಮೆಂಟ್ಸ ವ್ಯವಹಾರದಲ್ಲಿ ಪಾಲುದಾರ ಅಲ್ಲ ಎಂದರೆ ಸರಿಯಲ್ಲ. ಹಾಗೆ ತೋರಿಸಲು ನಾನು ದಾಖಲಾತಿ ಹಾಜರು ಮಾಡಿಲ್ಲ.

ದಾವಾ ಐಟಮ ನಂ.5 ಮತ್ತು 7 ಈಗ ಶುಭಂ ಗಾರ್ಮೆಂಟ್ಸ ನ ಒಂದು ಭಾಗ ಎಂದರೆ ಸರಿ . 1958 ರಲ್ಲಿ ದಾವಾ ಐಟಮ ನಂ.7 ನ್ನು ಮೊದಲನೆ ಪ್ರತಿವಾದಿ ಮಾತ್ರ ಖರೀದಿಸಿದ್ದ ಎಂದರೆ ಸಾಕ್ಷಿ ಎಲ್ಲರೂ ಕೂಡಿಯೇ ಖರೀದಿಸಿದ್ದು ಎಂದು ನುಡಿದಿರುತ್ತಾರೆ. ನಾನು ಹುಟ್ಟಿದ್ದು 1961 ರಲ್ಲಿ. ದಾವಾ ಐಟಮ ನಂ.7 ನ್ನು ಮೊದಲನೆ ಪ್ರತಿವಾದಿ ಚಹಾ ಉದ್ಯೋಗ ಮತ್ತು ಕೂಲಿ ಕೆಲಸದಿಂದ ಖರೀದಿಸಿದ್ದು ಎಂದರೆ ಸರಿ. ಮೊದಲನೆ ಪ್ರತಿವಾದಿ ಸದರಿ ಆಸ್ತಿಯನ್ನು 11 ನೇ ಪ್ರತಿವಾದಿಗೆ ಬಕ್ಸಿಸು ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದನ್ನು ಮೊದಲನೆ ಪ್ರತಿವಾದಿಗೆ ಗೊತ್ತಾಗದ ಹಾಗೆ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ 11 ನೇ ಪ್ರತಿವಾದಿಯ ಹೆಸರು ಹಚ್ಚಿರುವ ವಿಷಯವನ್ನು ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ಈ ದಾವೆಯನ್ನು ಹಾಕಿದ ನಂತರ ಗೊತ್ತಾಗಿದೆ ಎಂದು ನುಡಿದಿರುತ್ತಾರೆ. ನನ್ನ ಸಾಕ್ಷ್ಯಪ್ರಮಾಣದ 4 ನೇ ಪ್ಯಾರಾದಲ್ಲಿ ಹೇಳಿದ ಆಸ್ತಿಗಳನ್ನು ನನ್ನ ಎರಡು ಆಸ್ತಿಗಳನ್ನು ಮೊದಲನೆ ಪ್ರತಿವಾದಿಯ ಹೆಸರಿಗೆ ಮಾಡಿ ಪಡೆದಿದ್ದು. ಸದರಿ ಆಸ್ತಿಗಳನ್ನು ನಾನು ವೆಂಕಟೇಶ್ವರ ಸಂಪ್ಲಾಯರ್ಸ ಆದಾಯದಿಂದ ಖರೀದಿಸಿದ್ದು .

ನಾನು ಸದರಿ ವ್ಯವಹಾರ ಮಾಡುತ್ತಿದ್ದೇನೆಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಶುಖಾದ್ಯಾ ವ್ಯವಹಾರ ಮಾಡುತ್ತಿದ್ದೆ ಎಂದು ತೋರಿಸಲು ದಾಖಲಾತಿ ಹಾಜರು ಮಾಡಿರುತ್ತೇನೆ . ಸಿ ಟಿ ಎಸ್ ನಂ.3226 ನನ್ನ ಅಜ್ಜ ಕೋನಪ್ಪನ ಹೆಸರನಲ್ಲಿತ್ತು ಎಂದು ತೋರಿಸಲು ನಾನು ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಐಟಮ ನಂ.1 ನ್ನು ವಾದಿ ಮಾರಾಟ ಮಾಡಿದ ವಿಷಯ ನನಗೆ ಗೊತ್ತು. ಸದರಿ ಆಸ್ತಿಯನ್ನು ವಾದಿ ನನಗೆ ಹೇಳದೆ ಮಾರಾಟ ಮಾಡಿದ್ದಾನೆ.

ಪಾಟೀ ಸವಾಲು ಶ್ರೀಯುತ ಬಿ ಕೆ ಜೆ ವಕೀಲರಿಂದ**.**

**15** ರಿಂದ **17** ನೇ ಪ್ರತಿವಾದಿಗಳ ಪರವಾಗಿಃ

ನನ್ನ ಸಹೋದರ ಬಸವರಾಜ ತೀರಿಕೊಂಡು 15-16 ವರ್ಷ ಆಗಿರಬಹುದು. 15 ರಿಂದ 17 ನೇ ಪ್ರತಿವಾದಿಗಳು ಆತನ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಮೊದಲನೆ ಪ್ರತಿವಾದಿ ತನ್ನ ಎಲ್ಲಾ ಮಕ್ಕಳ ಜೊತೆ ಇರುತ್ತಾರೆ. ಮೊದಲಿಗೆ ಮೊದಲನೆ ಪ್ರತಿವಾದಿ ನಮ್ಮ ಮನೆಯ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಮೊದಲನೆ ಪ್ರತಿವಾದಿ 1962 ರಲ್ಲಿ ದಿಲ್ಲಿ ರೆಡಿಮೆಡ ಸ್ಟೋರ ಪ್ರಾರಂಬಿಸಿದ್ದ ಎಂದರೆ ಸರಿ. ಸದರಿ ವ್ಯವಹಾರದಿಂದ ಸುಮಾರು 10 ವ್ಯವಹಾರಗಳನ್ನು ಪ್ರಾರಂಬಿಸಲಾಗಿರುತ್ತದೆ. ಮೊದಲನೆ ಪ್ರತಿವಾದಿ ಮತ್ತು ಆತನ ಎಲ್ಲಾ ಮಕ್ಕಳು ಉದ್ಯೋಗ ವ್ಯಾಪಾರ ಮಾತ್ರ ಎಂದರೆ ಸರಿ ದಿಲ್ಲಿ ರೆಡಿಮೆಡ ಸ್ಟೋರನಲ್ಲಿ ನಾವು ಎಲ್ಲಾ ಸಹೋದರರು ಕೆಲಸ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ವ್ಯವಹಾರ ಚೆನ್ನಾಗಿತ್ತು ಎಂದರೆ ಸರಿ. ದಿಲ್ಲಿ ಎಂಬ ಹೆಸರು ನಮ್ಮ ಕುಟಂಬಕ್ಕೆ ಒಳ್ಳೆದಾಗಿದ್ದರಿಂದ ನಾವು ಇನ್ನುಳಿದ 10 ವ್ಯವಹಾರಗಳನ್ನು ಅದೇ ಹೆಸರಿನಲ್ಲಿ ಪ್ರಾರಂಬಿಸಿದ್ದೇವೆ ಎಂದರೆ ಸರಿ. ಎಲ್ಲಾ 10 ವ್ಯವಹಾರಗಳನ್ನು ಇವತಿನವರೆಗೂ ಸಹ ಮೊದಲನೆ ಪ್ರತಿವಾದಿ ನೋಡಿಕೊಳ್ಳುತ್ತಾರೆ ಎಂದರೆ ಸರಿ.

ದಿಲ್ಲಿ ರೆಡಿಮೆಡ ಸ್ಟೋರ ಬಂಡವಾಳವೇ ಇನ್ನುಳಿದ ವ್ಯವಹಾರಗಳಿಗೆ ಬಂಡವಾಳ ಎಂದರೆ ಸರಿ. ನಾವು ಅಣ್ಣ ತಮ್ಮಂದಿರು ಮೊದಲನೆ ಪ್ರತಿವಾದಿಯ ವ್ಯವಹಾರದಿಂದ ಬೇರೆ ವ್ಯವಹಾರ ಪ್ರಾರಂಭಿಸಿದ್ದೇವೆ ಎಂದರೆ ಸರಿ. ಪ್ರಶಾಂತ ಲಾಡ್ಜ ವ್ಯವಹಾರವನ್ನು ನಾವು ಎಲ್ಲಾ ಅಣ್ಣ ತಮ್ಮಂದಿರು ಕೂಡಿಯೇ ಮಾಡುತ್ತೇವೆ ಎಂದರೆ ಸರಿ. ಮೊದಲನೆ ಪ್ರತಿವಾದಿ ತನ್ನ ಮಕ್ಕಳಲ್ಲಿ ವಾಟ್ನೆ ಮಾಡಿಲ್ಲ ಎಂದರೆ ಸರಿ.

ನಾವು ಅಣ್ಣ ತಮ್ಮಂದಿರು ವ್ಯವಹಾರಗಳನ್ನು ಮಾಡಬೇಕಾದರೆ ಮತ್ತು ಆಸ್ತಿ ಖರೀದಿ ಮಾಡಬೇಕಾದರೆ ಮೊದಲನೆ ಪ್ರತಿವಾದಿಯ ಸಲಹೆ ಪಡೆಯುತ್ತೇವೆ ಎಂದರೆ ಸಾಕ್ಷಿ ನಾನು ಖರೀದಿಸಿದ ಆಸ್ತಿಗಳಿಗೆ ಹೊರತು ಪಡಿಸಿ ಉಳಿದ ಆಸ್ತಿಗಳ ವ್ಯವಹಾರದಲ್ಲಿ ಅವರ ಸಲಹೆ ಪಡೆದುಕೊಂಡಿದ್ದೇವೆ ಎಂದು ನುಡಿದಿರುತ್ತಾರೆ. ಮೃತ ಬಸವರಾಜ ನಮ್ಮ ಜೊತೆಗೆ ವ್ಯವಹಾರ ಮಾಡುತ್ತಿದ್ದ. ಅನುಕೂಲಕ್ಕಾಗಿ ನಾವು ಎಲ್ಲಾ ಸಹೋದರರು ಅವರವರ ಹೆಸರಿನಲ್ಲಿ ಬ್ಯಾಂಕ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ನಾನು ಈಗ ದಿಲ್ಲಿ ಬೆಸ್ಟ ಕಲೆಕ್ಷನ ವ್ಯವಹಾರ ಮಾಡುತ್ತೇನೆ. ನನ್ನ ತಂದೆ ಅನುಕೂಲಕ್ಕಾಗಿ ತನ್ನ ಎಲ್ಲಾ ಮಕ್ಕಳ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿ ನಾನು ಖರೀದಿಸಿದ ಆಸ್ತಿಗಳನ್ನು ಹೊರತು ಪಡಿಸಿ ಎಂದು ನುಡಿದಿರುತ್ತಾರೆ. ಮೊದಲನೆ ಪ್ರತಿವಾದಿ ಎಲ್ಲಾ ಬ್ಯಾಂಕಿನಲ್ಲಿ ವ್ಯವಹಾರದ ಉದ್ದೇಶಕ್ಕಾಗಿ ತನ್ನ ಎಲ್ಲಾ ಮಕ್ಕಳು ಹೆಸರಿನಲ್ಲಿ ಖಾತೆ ತೆಗೆದಿದ್ದಾರೆ ಎಂದರೆ ಸರಿ. ಮೇಲೆ ಹೇಳಿದ ಎಲ್ಲಾ ವ್ಯವಹಾರಗಳು ಒಟು ಕುಟುಂಬದ ವ್ಯವಹಾರಗಳು ಎಂದರೆ ಸಾಕ್ಷಿ ನನ್ನ ವ್ಯವಹಾರಗಳನ್ನು ಹೊರತು ಪಡಿಸಿ ಎಂದು ನುಡಿದಿರುತ್ತಾರೆ. ನಾವು ಸದರಿ ವ್ಯವಹಾರದಿಂದ ಬಂದ ಹಣವನ್ನು ಹಂಚಿಕೊಳ್ಳುತ್ತೇವೆ ಎಂದರೆ ಸರಿ.

ಪ್ಲಾಟ್ ನಂ.36 ಮತ್ತು ಸಿ.ಟಿ. ಎಸ್ ನಂ.3301 ನ್ನು ಸಹ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸಾಕ್ಷಿ ನನ್ನ ವೈಯಕ್ತಿಕ ಗಳಿಕೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ನನ್ನ ವೈಯಕ್ತಿಕ ಎಂದು ತೋರಿಸಲು ನಾನು ದಾಖಲಾತಿ ಹಾಜರು ಮಾಡಿರುತ್ತೇನೆ. ಸದರಿ ಆಸ್ತಿಗಳಲ್ಲಿ ಪಾಲನ್ನು ಕೊಡುವುದನ್ನು ತಪ್ಪಿಸಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 15 ರಿಂದ 17 ನೇ ಪ್ರತಿವಾದಿಗಳು ಮೃತ ಬಸವರಾಜನ ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗಿದ್ದಾರೆ ಎಂದರೆ ಸರಿ. ಅವರೂ ಸಹ ಎಲ್ಲಾ ವ್ಯವಹಾರದಲ್ಲಿ ಭಾಗಿಯಾಗುತ್ತಾರೆ ಎಂದರೆ ಸರಿ. ಪ್ಲಾಟ ನಂ. 36 ಮತ್ತು ಸಿ ಟಿ ಎಸ್ ನಂ.3301 ನನ್ನ ಸ್ವಂತ ಆಸ್ತಿಗಳು ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18 ನೇ ಪ್ರತಿವಾದಿಯ ಪರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ